**ಸಾಕ್ಷಿಯನ್ನು ಪ್ರಮಾಣ ವಚನ ಭೋಧಿಸಲಾದ ದಿನಾಂಕಃ 10-09-2025**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ. ಪಿ ಎನ್ ಬಿ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಚಾರಗಳು ನನಗೆ ಗೊತ್ತಿದ್ದು, ಅವುಗಳು ಸತ್ಯವಾಗಿವೆ ಮತ್ತು ಅದರಲ್ಲಿರುವ ಸಹಿ ನನ್ನದೆ ಆಗಿರುತ್ತದೆ.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಆರ್ ಎಮ್ ಎಚ್ ವಕೀಲರಿಂದಃ**

ವಾದಿ- ಛತ್ರಪತಿ ಶಿವಾಜಿ ವ್ಯಾಯಾಮ ಶಾಲಾ ಇದು ಏನು ಎಂದರೆ ಸಾಕ್ಷಿಯು ಮೊದಲು ವ್ಯಾಯಾಮ ಶಾಲೆ ಇತ್ತು ಅದು ಈಗ ಬಿದ್ದಿರುತ್ತದೆ ಎನ್ನುತ್ತಾರೆ. ಛತ್ರಪತಿ ಶಿವಾಜಿ ವ್ಯಾಯಾಮ ಶಾಲೆ ಇದನ್ನು ಮೊದಲಿನಿಂದಲು ಹಿರಿಯರು ನಡೆಸುತ್ತಿದ್ದರು. ಅವರು ಈಗ ಮರಣಹೊಂದಿರುತ್ತಾರೆ. ರಾಮಾ ಕುಂಬಾರ, ನಾಗೇಶ ಯಳ್ಳೂರಕರ ಅವರು ಈಗ ಮರಣಹೊಂದಿರುತ್ತಾರೆ. ಯಾವಾಗ ಮರಣ ಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ನಂಬರ ನನಗೆ ಮಾಹಿತಿ ಇಲ್ಲ. ಗೋಕುಲ ಗಣಪತಿ ಸಾಳುಂಕೆ ನನಗೆ ಕಜಿನ್ ಸಹೋದರ. ಶೋಬಾಬಾಯಿ ನಾಗೇಶರಾವ ದೇಸಾಯಿ @ ಸರ್ ದೇಸಾಯಿ. ಇವರು ನಮ್ಮ ಮನೆಯ ಪಕ್ಕದವರು. ನಾನು ಹೇಳುತ್ತಿರುವ ವ್ಯಾಯಾಮ ಶಾಲೆ ಜಾಗೆ ಇದು ಸದರಿ ಶೋಬಾಬಾಯಿ ಇವರ ಮಾಲ್ಕಿಯಲ್ಲಿ ಇತ್ತು. ಸುಲಕ್ಷಣಾದೇವಿ ಮೊಹಿತೆ ಇವರು ಶೋಬಾಬಾಯಿಯ ಮಗಳು. ಇವರು ಶೋಬಾಬಾಯಿಗೆ ಒಬ್ಬಳೆ ಮಗಳು. ಶೋಬಾಬಾಯಿ ಇವಳು ಛತ್ರಪತಿ ಶಿವಾಜಿ ವ್ಯಾಯಾಮ ಶಾಲೆ ಮತ್ತು ನನ್ನ ಸಹೋದರ ಗೋಕುಲ ಗಣಪತ ಸಾಳುಂಕೆ ಮತ್ತು ಇತರ ಕೆಲವು ಜನರ ವಿರುದ್ಧ ಅಸಲ ದಾವಾ ನಂ.21/1977 ನೇದ್ದನ್ನು ಸಲ್ಲಿಸಿದ್ದ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ದಾಖಲೆಯನ್ನು ನಾನು ನೋಡಿಲ್ಲ. ವ್ಯಾಯಾಮ ಶಾಲೆಯನ್ನು ಯಾರು ಕಟ್ಟಿದ್ದರು ಎಂದು ನನಗೆ ಹೇಳಲಾಗುವುದಿಲ್ಲ ಆದರೆ ನಮ್ಮ ಗಲ್ಲಿಯ ಹಿರಿಯರು ಕಟ್ಟಿದ್ದಾರೆ. ಯಾವ ವರ್ಷ ನನಗೆ ಕಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ಗಲ್ಲಿಯಲ್ಲಿರುವ ಹಿರಿಯರ ಹೆಸರು ದತ್ತಾ ಬಿರ್ಜೆ, ಗುಂಡೊಬಾ ಬಿರ್ಜೆ, ಗುಂಡೊಬಾ

ಕುಂಬಾರ, ಪರಶುರಾಮ ರುಂಬೆವಾಡಕರ. ಹಿರಿಯರು ವ್ಯಾಯಾಮ ಶಾಲೆ ಕಟ್ಟಿದ್ದನ್ನು ನಾನು ನೋಡಿಲ್ಲ. ನಾನು ವ್ಯಾಯಾಮ ಶಾಲೆಯಲ್ಲಿ ಕುಸ್ತಿ ಆಡಿದ್ದೆನೆ ಆದರೆ ಬೇರೆ ಕಡೆ ಆಡಿಲ್ಲ. ದಾವಾ ಆಸ್ತಿಯಲ್ಲಿ ವಾದಿ- ವ್ಯಾಯಾಮ ಶಾಲೆ ಇತ್ತು ನಾನು ಕುಸ್ತಿ ಆಡಲು ಮತ್ತು ವ್ಯಾಯಾಮ ಮಾಡಲು ಹೋಗುತ್ತಿದ್ದೆ. ಅದೇ ರೀತಿ 2019 ಮತ್ತು 2020 ರಲ್ಲಿ ಮಳೆಯಾಗಿ ವ್ಯಾಯಾಮ ಶಾಲೆ ಬಿದ್ದಿರುತ್ತದೆ ಎಂದು ಪ್ರಮಾಣ ಪತ್ರದಲ್ಲಿ ಹೇಳಿದ ವಿಷಯ ಸುಳ್ಳು ಎಂದರೆ ಸರಿಯಲ್ಲ. ನಾವು ಬಿರ್ಜೆ ಕುಟುಂಬದವರು ಸಂಬಂಧಿಕರು ಎಂದರೆ ಸರಿ. ಗಲ್ಲಿಯಲ್ಲಿರುವ ಬಿರ್ಜೆ, ಗಾವಡೆ, ಸಾಳುಂಕೆ ಮತ್ತು ಇತರೆ ಕುಟುಂಬಗಳು ಪ್ರತಿವಾದಿ ನಂ.1 ರವರು ಬೆಳಗಾವಿಯಲ್ಲಿ ವಾಸವಾಗಿರುವುದನ್ನು ದುರುಪಯೋಗ ಮಾಡಿಕೊಂಡು ದಾವಾ ಆಸ್ತಿಯನ್ನು ಕಬ್ಜೆ ಮಾಡಲು ಪ್ರಯತ್ನಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.1 ರವರ ತಾಯಿ ಜೀವಂತ ಇದ್ದಾಗ ಕೂಡ ಅವರು ದಾವಾ ಆಸ್ತಿಯನ್ನು ಕಬ್ಜೆ ಮಾಡಲು ಪ್ರಯತ್ನಿಸಿದ್ದರು ಆ ಕಾರಣಕ್ಕಾಗಿ ಅವರ ಮೇಲೆ ನ್ಯಾಯಾಲಯದಲ್ಲಿ ಮನಾಯಿ ಹುಕ್ಕುಂ ಅನ್ನು ಪಡೆದಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಆಸ್ತಿಯು ರಸ್ತೆಯ ಕಾರ್ನರ ದಲ್ಲಿ ಇದೆ ಎಂದರೆ ಸರಿ. ದಾವಾ ಆಸ್ತಿಯು ದೊಡ್ಡ ಜಾಗೆ ಇದೆ ಎಂದರೆ ಸರಿ. ಗಲ್ಲಿಯ ಜನರು ಸೇರಿಕೊಂಡು ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದಾರೆ ಅದಕ್ಕೆ ಅನುಕೂಲವಾಗಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**ಮರವಿಚಾರಣೆಃ ಇಲ್ಲ.**

(ಈ ಮೇಲಿನ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಆಧರಿಸಿ ನಾನು ಹೇಳಿದಂತೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ. ಸರಿ ಅದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ**
**ಖಾನಾಪೂರ.**